(Interruptions)

SRI B. I. PATIL :- Sir, they are not implementing. I am going to stage Dharna with my colleagues Sir.....

(At this stage hon. Members belonging to M.E.S. Group squatted in Dharana in the well of the House).

SRI M.P. PRAKASH :- I appeal to the Members of MES Group to resume their seats. It is not that we want to discriminate. The question of Belgaum and all doesn't arise at all. With regard to linguistic minorities protection has already been given by the Government. It has been done....

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೇ, ಇಲ್ಲಿ ಅನಾವಶ್ಯಕವಾಗಿ ಭಾವೋದ್ವೇಗಕ್ಕೆ ಒಳಗಾಗತಕ್ಕಂಥ ವಿಚಾರ ಇದಲ್ಲ. ಅವರು ಗಮನ ಸೆಳೆಯುವ ಸೂಚನೆಯಲ್ಲಿ ಕೇಳಿರತಕ್ಕಂಥಾದ್ದು ಇಷ್ಟೆ. ಸರಕಾರದವರು ಹೊರಡಿಸಿದ ಆಜ್ಞೆಯನ್ನು ಜಾರಿ ಮಾಡುತ್ತಾ ಇಲ್ಲ ಎಂಬುದು ಅವರ ವಾದ. ಅದನ್ನು ಜಾರಿ ಮಾಡಿಸುತ್ತೇವೆ ಎಂದು ಹೇಳಿದರೆ ಮುಗಿಯಿತು. ಆದ್ದರಿಂದ ಮಿತ್ರರುಗಳಾದ ಎಂಇಎಸ್‌ನ ಮಾನ್ಯ ಸದಸ್ಯರುಗಳು ಅದಕ್ಕೋಸ್ಕರ ಧರಣಿ ಕುಳಿತುಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ. ಇದು ಭಾಷಾ ವಿಷಯ, ಬಹಳ ಸೂಕ್ಷ್ಮವಾಗಿರುವಂಥಾದ್ದು. ತಾವು ಸರಕಾರಕ್ಕೆ ಹೇಳಿ ಆ ಸರ್ಕ್ಯುಲರ್‌ನಲ್ಲಿ ಏನು ಇದೆ ಅದನ್ನು ಜಾರಿ ಮಾಡಿರಿ. ಅದನ್ನೇ ಅವರು ಕೇಳುತ್ತಾ ಇದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೇ, ಭಾಷೆಯ ವಿಚಾರದಲ್ಲಿ, ನದಿ ನೀರಿನ ವಿಚಾರದಲ್ಲಿ ಅನೇಕ ಸೂಕ್ಷ್ಮಾತಿಸೂಕ್ಷ್ಮ ವಿಚಾರಗಳು ಒಳಗಾಗಿರುತ್ತವೆ. ಮಾನ್ಯ ಸದಸ್ಯರುಗಳು ತಮ್ಮ ಭಾವನೆಗಳಿಗೆ ಸಂಬಂಧಪಟ್ಟಂತೆ ಅಭಿವ್ಯಕ್ತ ಮಾಡಲು ಅವರಿಗೆ ಅಧಿಕಾರ ಇದೆ. ಈಗಾಗಲೇ ಹೈಕೋರ್ಟ್‌ನಲ್ಲಿ ಎರಡು ರಿಟ್‌ಪಿಟಿಷನ್ಸ್ ಇವೆ. ಈ ವಿಚಾರದಲ್ಲಿ ಪ್ರಸ್ತಾಪವಾಗಿದೆ. ಅಂಥಹ ಸಂದರ್ಭದಲ್ಲಿ ಇದನ್ನು ದೀರ್ಘವಾಗಿ ಚರ್ಚೆ ಮಾಡತಕ್ಕಂಥ ಅಗತ್ಯವಿಲ್ಲ. ಭಾಷಾ ಅಲ್ಪಸಂಖ್ಯಾತರುಗಳಿಗೆ ಕೊಡಬೇಕಾದಂಥ ಸೌಕರ್ಯಗಳ ಬಗ್ಗೆ ಮತ್ತು ಸಂವಿಧಾನದಲ್ಲಿ ಕಲ್ಪಿಸಿಕೊಟ್ಟಿರತಕ್ಕಂಥ ಸವಲತ್ತುಗಳನ್ನು ಅವರಿಗೆ ಕೊಡಲು ಸರಕಾರವು ಯಾವೊತ್ತೂ ಕೂಡ ಸಿದ್ಧವಿದೆ. ಆ ವಿಚಾರಗಳ ಬಗ್ಗೆ ತಾವು ಆಗಲೇ ಗಮನವನ್ನು ಸೆಳೆದಿದ್ದೀರಿ. ಸರಕಾರದವರು ಅದಕ್ಕೇ ಸೂಕ್ತ ಉತ್ತರವನ್ನು ಕೊಟ್ಟಿದೆ. ತಮ್ಮ ಮೂಲಕ ಮಾನ್ಯ ಎಂಇಎಸ್ ಸದಸ್ಯರುಗಳನ್ನು ಕೇಳಿಕೊಳ್ಳುತ್ತಾ ಇದ್ದೇನೆ. ತಾವುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಆಸೀನರಾಗಿ. ಈ ವಿಷಯದಲ್ಲಿ ತಮಗೆ ಹೆಚ್ಚಿನ ವಿಚಾರಗಳು ಬೇಕಾಗಿದ್ದರೆ ನಮ್ಮ ಕೊಠಡಿಗಳಲ್ಲಿ ಬಂದು ಚರ್ಚೆ ಮಾಡಬಹುದು. ಅಧ್ಯಕ್ಷರ ಚೇಂಬರ್ಸ್‌ನಲ್ಲಿ ಕುಳಿತು ಚರ್ಚೆ ಮಾಡಬಹುದು. ಸಭೆಯ ಕಾರ್ಯಕಲಾಪಗಳು ಈಗಾಗಲೇ ತಡೆಹಿಡಿಯಲ್ಪಟ್ಟಿರುವುದರಿಂದ ನೀವು ಧರಣಿ ಮಾಡುವುದರ ಮೂಲಕ ಯಾವುದನ್ನೂ ಸಾಧಿಸಲು ಆಗುವುದಿಲ್ಲ. ದಯಮಾಡಿ ತಾವುಗಳು ತಮ್ಮ